ಜಗತ್ತಿನೊಂದಿಗೂ ನಟಿಸುತ್ತಲೇ ಬದುಕು ಮುಗಿಸುತ್ತಾರಾ? ಹಾಗಿದ್ದರೆ, ಅಪಾರ ಶ್ರದ್ಧೆಯ ನಿರ್ಮಿತಿಗಳಾದ ಸಂಸ್ಕೃತಿ, ನಾಗರಿಕತೆಗಳಂತಹ ಪರಿಕಲ್ಪನೆಗಳಿಗೆ ಏನರ್ಥ? ಮುರುಘರಾಜ ಮತ್ತು ವಕೀಲರ ಸಂಬಂಧ ಹಳಸಬಹುದೇ? ಇಂವ ನನ್ನ ಮಗ, ಅವು ನಾಲಾರು ಅವನ ಮಕ್ಕಳು ಎಂದು ಹೇಳಿದ್ದರು, ವಕೀಲರು. ವಕೀಲರ ನಾಲ್ಕೂ ಮಕ್ಕಳನ್ನು ಅಪ್ಪನಿಗಿಂತ ಅಪ್ಪನಾಗಿ ಪೊರೆದವ ಮುರುಘರಾಜ. ವಕೀಲರ ಹೆಂಡತಿ, ತನ್ನ ಕಡು ಬಡತನದ ಬೇಸೂರು ಒಂಟಿ ಬಾಳನ್ನು ಸಲಹಿಕೊಳ್ಳಲು ತಂದ ಕೂಸು ಈ ಮುರುಘರಾಜ. ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತ ಹೆಚ್ಚಾಗಿ, ಅವ್ವನಿಗೇ ಅವ್ವನಾಗಿ ಒದಗಿಬಂದವನೀತ. ಬದುಕನ್ನು ಬಡತನದ ಬೇಗೆ ಮತ್ತು ಅಪಮಾನದ ಕಾವಿನಲ್ಲಿ ಕರಕಾಗಿಸಿಕೊಂಡ ಅವ್ವನ ಕಣ್ಣಿನಲ್ಲೂ ಬೆಳಕು ಮೂಡಿಸಿದವ. ಪಕ್ಕದ ಮನೆಯಿಂದ ಅನ್ನದ ಗಂಜಿ ಬೇಡಿ ತಂದು ಬೆಚ್ಚಗೆ ಮಾಡಿ ಕುಡಿದು, ಎಲ್ಲಿಯದೋ ಹೋಳಿಗೆ ಪರಿಮಳಕ್ಕೆ ಮೂಗರಳಿಸಿ ಕಣ್ಣು ಮಂಜಾಗಿಸಿಕೊಂಡವಳಿಗೆ; ತಾನೂ ತನ್ನ ಮಕ್ಕಳಿಗೆ ಹೋಳಿಗೆ ಮಾಡಿ ಉಣಲಿಕ್ಕುವ ಐಭೋಗವನ್ನು ಕರುಣಿಸಿದವನೀತ. 'ನಿನ್ನ ಹೊಟ್ಟೇಲೂ ಮಕ್ಕಳಿದ್ದಾರೆ ಬಿಡವ್ವ, ಧೀಂ ಅಂತ ಬೆಳ್ದು ದೊಡ್ಡೋರಾಗ್ತಾರೆ. ಆಗ ಮದ್ವೆಗೆ ಕರೆಯೋಕ್ಕಲ್ಲ, ಹೆಣ್ಣ ಕೊಡಾಕಂತಾನೇ ಓಡಾಡ್ತಾರೆ ನೋಡ್ತಿರು' ಎಂದು ಅವ್ವನ ಕಣ್ಣಿಗೆ ಕನಸು ಮೂಡಿಸಿದ ಗೆಳತಿಯಂತಹ ಮಗನೀತ. ನನ್ನ ಮಗ ಒಬ್ಬಾತನೇ ದುಡ್ಡು ಸೋ ಅಂತ ಸುಣ್ಣಾಗಿ ಬರ್ತಾನೆ ಅಂತ ಕಾಯ್ತಿದ್ದ ಇದೇ ಅವ್ವ, 'ಸೇಡು ತೀರ್ಸಿಕೊಳ್ಳಾಂಗೆ ಉಣ್ತಾನೆ. ನನ್ನ ಮಕ್ಕಳು ಅಡಿಗಿ ಏನು ಅಂತಾನೂ ಕೇಳಂಗಿಲ್ಲ' ಎಂದು ಮುರುಘರಾಜನನ್ನು ಆಚೆಯಿಡೋದು ಹೇಗೆ ಸಾಧ್ಯವಾಯ್ತು? ಭಾವನಾತ್ಮಕತೆಗೂ ಆರ್ಥಿಕತೆಗೂ ಇರುವ ಸಂಬಂಧವನ್ನು ಕಾಮೂವಿನ 'ರೂಪಾಂತರ' ಕಥೆಯಂತೆ ಎದುರಿಡುವ ಕಥನವಿದು.

ಸಂಬಂಧಗಳ ಆಪ್ತತೆಯನ್ನು ನಿರ್ವಹಿಸುವುದು ಯಾಕೆ ಕಠಿಣವಾಗುತ್ತದೆ? 'ಒಂದಲ್ಲ, ಒಂಭತ್ತಿಲ್ಲದಿದ್ರೂ ಮಾಡೀನಿ' ಎಂದು ತಮ್ಮಂದಿರನ್ನು ನೋಡಿಕೊಂಡ ತನ್ನ ಹೆಚ್ಚುಗಾರಿಕೆಯ ಬಗ್ಗೆ ಅಂದುಕೊಳ್ಳುವ ಮುರುಘರಾಜನಿಗೆ ಯಾಕದನ್ನು ಕಡೆತನಕಾ ಜತ್ತು ಹಿಡಿಯಲಾಗಲಿಲ್ಲ? ಅಣ್ಣ ಬರುವವರೆಗೂ ರೆಪ್ಪೆ ಮುಚ್ಚದ ಚಂದ್ರಮೌಳಿ ಈಗ ಅಣ್ಣನ ಮುಖ ಕಂಡರೆ ಆಗದ ಚಂದ್ರಮೌಳಿ ಇಬ್ಬರೂ ಒಂದೇನಾ? ಒಂದು ಜೀವ-ಜೀವಿತಗಳಲ್ಲಿ ಅದೆಷ್ಟು ಸ್ಥಿತ್ಯಂತರಗಳು? ಒಳಿತು-ಕೆಡಕುಗಳೆಂಬ ವಿರುದ್ಧ ಅರ್ಥಗಳು ಒಂದೇ ಕೇಂದ್ರದಲ್ಲಿ ಹೇಗೆ ಹುಟ್ಟುತ್ತವೆ? ಸ್ವಯಾರ್ಜಿತವಾದ ಈ ನರಕದಿಂದ ಬಿಡುಗಡೆಯೇ ಇಲ್ಲವೇ? ಇದರ ಕಡೆ ಏನು? ಈ ಕಾದಂಬರಿಯಲ್ಲಿ ಅವ್ವ, ಕಡೆಕಡೆಗೆ ಯಾರ ಮಂದಿರುತ್ತಾಳೋ ಅವರಂತೆ ಮಾತಾಡಿ ದಿನಗಳೆಯುವ ಪ್ರಯತ್ನದಲ್ಲಿ ತಲ್ಲೀನಳಾಗತೊಡಗುತ್ತಾಳೆ. ಈ ಅವ್ವ ಯಾರು? ಕಾದಂಬರಿಯ ಕಾಲ್ಪನಿಕ ಪಾತ್ರವೇ? ದಿನನಿತ್ಯದ ಬಾಳಾಟದಲ್ಲಿ ದಣಿದ ನಮ್ಮೆಲ್ಲರ ಅವ್ವನೇ? ಸಂಬಂಧಗಳನ್ನು ಕತ್ತರಿಸುವ ಕೊಲೆಗತ್ತಿಗಳನ್ನು ನಾವೆಲ್ಲರೂ ಬಲು ನಿಷ್ಠೆಯಿಂದ ಮಸೆಯುತ್ತಲೇ ಇರುತ್ತೇವಲ್ಲವೇ? ಒಂದು ನೋವು, ಹತಾಶೆ, ದಾರುಣತೆ ಯಾಕೆ ಬದಲಿಸಲಾರದ್ದು? ಚಂದ್ರಮೌಳಿ ಸತ್ತು ಪಟವಾಗಿ ನಿಂತ ಮೇಲಾದರೂ ಉಳಿದವರು ಸ್ವಾರ್ಥವನ್ನು ಸ್ವಕೇಂದ್ರಿತ ಚಿಂತನೆಯನ್ನು ಬಿಡಬಹುದಿತ್ತಲ್ಲವೇ? ತಮ್ಮಂದಿರನ್ನು ನಗರದ ಕಾಲೇಜಿಗೆ ಕಳಿಸುವಾಗ, 'ಎಲ್ಲಿ ನಾವೆಲ್ಲ ಎತ್ತೆತ್ತಗೋ ಆಗಿಬಿಡ್ತೀವೋ?' ಎಂದು ಒದ್ದಾಡುತ್ತಿದ್ದವ ಮುರುಘರಾಜ ಈಗದು ಕಣ್ಣೆದುರೇ ನಡೆಯುತ್ತಿರುವಾಗ, ಸಂಬಂಧವಿಲ್ಲದವನಂತೆ ಬಿಗುವಾಗಿರಲು ಹೇಗೆ ಸಾಧ್ಯವಾಯಿತು?

ಮನುಷ್ಯ ಸಂಬಂಧಗಳು, ಆಧುನಿಕತೆಯ ಆವರಣದಲ್ಲಿ ಮತ್ತಷ್ಟು ಅಕ್ರಾಮಕಗೊಂಡಿದ್ದನ್ನು ಕಾದಂಬರಿಯು ದೊಡ್ಡಪ್ಪನ ಮನೆಯ ಉದಾಹರಣೆಯೊಂದಿಗೆ ಮುಂದಿಡುತ್ತದೆ. ಹಿರಿಯ ಮಗ ಪ್ರಭುವಿನಷ್ಟು ಸುಂದರನೂ ಜಾಣನೂ ಅಲ್ಲವೆಂದು ಗಿರಿಜೇಶಮೂರ್ತಿಯೆಂಬ ಎರಡನೆಯ ಮಗನ ಬಗ್ಗೆ ಕುಟುಂಬ ಉಪೇಕ್ಷಿಸುತ್ತದೆ; ಹಕ್ಕಿಯನ್ನೂ ಮೀನನ್ನೂ ಒಂದೇ ಅಳತೆಗೋಲಿನಿಂದ ಅಳೆಯಬಾರದು ಎಂಬ ಸಾಮಾನ್ಯ ಜ್ಞಾನವೂ ಇಲ್ಲದಂತೆ. ಪರಂಪರಾಗತ ವ್ಯವಸ್ಥೆ ರೂಪಿಸಿಟ್ಟ ವ್ಯಕ್ತಿತ್ವ ನಿರ್ಮಿತಿಯ ಚಹರೆಯನ್ನು ಆಧುನಿಕತೆಯು ಇನ್ನಷ್ಟು ಹೊಳಪುಗೊಳಿಸಿ ಚಲಾವಣೆಗೆ ತಂದಿತ್ತು. ಮಾಸ್ತಿಯವರ 'ಸುಬ್ಬಣ್ಣ' ಕಾದಂಬರಿ ಇದೇ ಸಮಸ್ಯೆಯತ್ತ ಬೆಳಕು ಚೆಲ್ಲಿತ್ತು. ಮಗ ಸುಬ್ರಹ್ಮಣ್ಯಶಾಸ್ತ್ರಿಯಾಗುತ್ತಿಲ್ಲ ಎಂಬ